## ಚಾಲಾಕಿ ಅಜ್ಜಿ

ಶಾಂತಾಬಾಯಿ ಮತ್ತು ಕಮಲಾಬಾಯಿ ಒಂದು ಕಿಟ್ಟಿ ಪಾರ್ಟಿಯಲ್ಲಿ ಮಾತನಾಡುತ್ತ ಕೂತಿದ್ದರು, ಶಾಂತಾಬಾಯಿ ಬೇಸರದಿಂದ, 'ನನ್ನ ಮೊಮ್ಮಕ್ಕಳ ಹುಟ್ಟಿದ ಹಬ್ಬಕ್ಕೆ ಚೆಕ್ ಕಳಿಸುತ್ತೇನೆ. ಅದು ತಲುಪಿತೊ, ಇಲ್ಲವೊ ಎನ್ನುವುದೂ ಗೊತ್ತಾಗುವುದಿಲ್ಲ. ಒಂದು ಫೋನ್ ಕೂಡ ಮಾಡುವುದಿಲ್ಲ' ಎಂದರು. ಕಮಲಾಬಾಯಿ, 'ನಾನು ಸಹ ನನ್ನ ಮೊಮ್ಮಕ್ಕಳ ಹುಟ್ಟುಹಬ್ಬಕ್ಕೆ ಚೆಕ್ ಕಳಿಸುತ್ತೇನೆ. ಅದು ಸೇರಿದ ಮರು ದಿನವೇ ಓಡೋಡಿ ಬಂದು, ಕಾಲಿಗೆ ನಮಸ್ಕರಿಸಿ ಹೋಗುತ್ತಾರೆ' ಎಂದರು. 'ನೀನು ಪುಣ್ಯ ಮಾಡಿದ್ದೀಯಾ ಬಿಡು' ಎಂದರು ಶಾಂತಾಬಾಯಿ. 'ಪುಣ್ಯ ಏನಿಲ್ಲ, ನಾನು ಆ ಚೆಕ್‌ಗೆ ಸಹಿ ಹಾಕಿರಲ್ಲ. ಅವರು ಓಡಿ ಬಂದು, ಕಾಲಿಗೆ ಬಿದ್ದು ಆ ಚೆಕ್ ತೋರಿಸುತ್ತಾರಲ್ಲ, ಆಗ ಸಹಿ ಹಾಕಿ ಕಳಿಸಿಕೊಡ್ತೀನಿ!' ಎಂದರು ಕಮಲಾಬಾಯಿ.



**ವಿ. ವಿಜಯೇಂದ್ರ ರಾವ್**

## ಮತ್ತೊಂದು ಚುನಾವಣೆ



ಗುಂಡ ಹಾಗೂ ಪದ್ದಿಯರ ದಾಂಪತ್ಯ ಜೀವನ ಚೆನ್ನಾಗಿಯೇ ಇತ್ತು. ಪರಸ್ಪರ ತಮಾಷೆ ಮಾಡುತ್ತಾ ದಿನ ಕಳೆಯುತ್ತಿದ್ದರು. ಅದೊಂದು ದಿನ ಮಾತನಾಡುತ್ತಾ ಕುಳಿತಾಗ, 'ನಮ್ಮ ಮದುವೆಯಾಗಿ ಮುಂದಿನ ವಾರಕ್ಕೆ ಐದು ವರ್ಷಗಳಾಗುತ್ತವೆ' ಎಂದು ಪದ್ದಿ ನೆನಪಿಸಿದಳು. ಗುಂಡ, 'ಐದು ವರ್ಷವಾ? ಹಾಗಿದ್ದರೆ ಮತ್ತೊಂದು ಚುನಾವಣೆ ನಡೆಯುವ ಅವಕಾಶ ಇದೆಯಾ ಅಥವಾ ಇದೇ ಸರ್ಕಾರ ಮುಂದುವರೆಯುತ್ತದಾ?' ಎಂದ. 'ಮತ್ತೊಂದು ಚುನಾವಣೆ ನಡೆಸುವ ಶಕ್ತಿ, ಹಣ, ತಾಕತ್ತು ನಿಮ್ಮಲ್ಲಿದೆಯಾ? ಇದ್ದರೆ ನಡೆಸಿ, ಹೊಸ ಸರ್ಕಾರ ಬರುತ್ತಾ, ಇದೇ ಸರ್ಕಾರ ಮುಂದುವರಿಯುತ್ತಾ ತೀರ್ಮಾನವಾಗುತ್ತದೆ' ಎಂದಳು. ಅವಳ ಮಾತಿಗೆ ಗುಂಡ ತೆಪ್ಪಗೆ ಕುಳಿತ.

**ಭೋಜರಾಜ ಸೊಪ್ಪಿಮಠ**